
## ಭೂತ ಆಂಟಿ



ಸರ್ಕಾರಿ ಸೇವೆಯಿಂದ ನಿವೃತ್ತಿ ಪಡೆದ ನೆಂಟರೊಬ್ಬರು ಬಹಳ ವರ್ಷಗಳ ನಂತರ ನಮ್ಮ ಮನೆಗೆ ಬಂದರು. 'ಹೇಗೆ ಸಾಗಿದೆ ನಿವೃತ್ತಿ ಜೀವನ?' ಎಂದು ಕೇಳಿದೆ. 'ಹಗಲು ತೊಂದರೆ ಇಲ್ಲ, ರಾತ್ರಿ ನಿದ್ರೆ ಸರಿಯಾಗಿ ಬರುವುದಿಲ್ಲ, ಯಾರೂ ಇಲ್ಲದ ಮನೆಯಲ್ಲಿ ಒಬ್ಬಳೇ ಭೂತದ ತರಹ ಓಡಾಡುತ್ತೇನೆ' ಎಂದು ನಕ್ಕರು. ಮತ್ತೆ ಸಂಜೆ ಬರುವುದಾಗಿ ಹೇಳಿ ತಮ್ಮ ಸ್ನೇಹಿತೆಯ ಮನೆಗೆ ಹೋದರು. ಸಂಜೆ ಎಂದಿನಂತೆ ವಿದ್ಯುತ್ ಕೈ ಕೊಟ್ಟಿತು. ನಾನು ಅಡುಗೆ ಮನೆಯಲ್ಲಿದ್ದೆ. ಯಾರೋ ಬಾಗಿಲು ಬಡಿದರು. 'ಯಾರು ನೋಡು' ಎಂದು ನನ್ನ ಮಗನಿಗೆ ಹೇಳಿದೆ. ಆತ, 'ಭೂತ...' ಎಂದ. ನಾನು ಗಾಬರಿಯಾಗಿ ಅಡುಗೆ ಮನೆಯಿಂದ ಹೊರಗೆ ಬಂದೆ. 'ಅದೇ ಅಮ್ಮ, ಬೆಳಿಗ್ಗೆ ಬಂದಿದ್ದರಲ್ಲ... ಭೂತ ಆಂಟಿ' ಎಂದು ವಿವರಣೆ ಕೊಟ್ಟ!

**ಪೂರ್ಣಿಮಾ ಗುರುದೇವ ಭಂಡಾರ್ಕರ್**

## ಗಂಧೀ ತಸ್ವೀರ್

ಉತ್ತರ ಭಾರತದಲ್ಲಿ ಕೆಲಸ ಮಾಡುತ್ತಿದ್ದ ನಮ್ಮ ಪರಿಚಯದ ಕಮಲಮ್ಮನ ಮಗ, ಸೊಸೆ ಹಾಗೂ ನಾಲ್ಕು ವರ್ಷದ ಮೊಮ್ಮಗಳು ನೀಲು, ರಜೆ ಕಳೆಯಲು ಬೆಂಗಳೂರಿಗೆ ಬಂದಿದ್ದರು. ನೀಲುಗೆ ಕನ್ನಡ ಅಷ್ಟಕ್ಕಷ್ಟೇ. ಬೆಳಗಿನ ತಿಂಡಿ ತಯಾರಿಸುತ್ತಿದ್ದ ಕಮಲಮ್ಮ, ನೀಲುಗೆ, 'ಪುಟ್ಟೀ, ತಾತಾ ಏನ್ಮಾಡ್ತಿದ್ದಾರೆ ನೋಡಿ ಬಾ' ಎಂದರು. ತಾತನ ರೂಮಿಗೆ ಬಂದು ಇಣುಕಿ, ವಾಪಸು ಬಂದ ನೀಲು, 'ನಾನಿ, ನಾನಾ ಗಂಧೀ ತಸ್ವೀರ್ ಬನಾರಹೆ ಹೈ' ಎಂದಳು. ಕಮಲಮ್ಮ ಕೂಡಲೇ ಮೇಲೆ ಹೋಗಿ ನೋಡಿದರು. ಅವರ ಪತಿ ತಾವು ಬಿಡಿಸಿದ ಗಾಂಧೀಜಿ ಚಿತ್ರಕ್ಕೆ ಬಾರ್ಡರ್ ಹಾಕುತ್ತಿದ್ದರು. 'ಗಾಂಧಿ' ಎನ್ನುವ ಪದ ಅವಳ ಬಾಯಿಯಲ್ಲಿ 'ಗಂಧೀ' (ಕೆಟ್ಟ) ಆಗಿತ್ತು.



**ಅರವಿಂದ ಜಿ. ಜೋಷಿ**